ಮೂ. ದಾ. ನಂ. 76/18

ಪಿ.ಡಬ್ಲ್ಯು. 1

(ಇಂದು ದಿನಾಂಕ 05-09-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು - ಪ್ರತಿವಾದಿ ಪರ ಶ್ರೀ ಆರ್.ಜಿ.ಎನ್. ವಕೀಲರಿಂದ-**

ನನ್ನ ತಂದೆಯವರಿಗೆ ನಾಲ್ಕು ಜನ ಮಕ್ಕಳು. ನಾನು ಹಾಲಿ ಬೆಂಗಳೂರು ಗ್ರಾಮಾಂತರ ಹೊಸಕೋಟೆಯಲ್ಲಿರುತ್ತೇನೆ. 2 ನೇ ವಾದಿಯು ಗೋವಾದಲ್ಲಿ ವಾಸವಾಗಿದ್ದಾರೆ. ನಾನು ಸುಮಾರು 30 ವರ್ಷಗಳಿಂದ ಹೊಸಕೋಟೆಯಲ್ಲಿ ಇದ್ದೆನೆ. 2 ನೇ ವಾದಿಯು 18 ವರ್ಷಗಳಿಂದ ಗೋವಾದಲ್ಲಿ ವಾಸವಾಗಿದ್ದಾರೆ. ದಾವಾ ಬರೆಯುವುದಕ್ಕೆ ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ.

ದಾವಾ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿದ್ದರು. ಸದರಿ ಆಸ್ತಿಯನ್ನು ತಂದೆಯವರು ಯಾವಾಗ ಖರೀದಿ ಮಾಡಿದ್ದರು ಎಂಬ ಬಗ್ಗೆ ಮಾಹಿತಿ ಇಲ್ಲ. ಸದರಿ ಆಸ್ತಿಯ ಸ.ನಂ. 188/2 ಕ್ಷೇತ್ರ 1-0-0 ಎಕರೆ ಆಗಿರುತ್ತದೆ. ಸದರಿ ಆಸ್ತಿಯನ್ನು ಯಾರಿಂದ ಖರೀದಿ ಮಾಡಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ನನ್ನ ತಂದೆಯವರು ಖರೀದಿ ಮಾಡುವಾಗ ನನಗೆ ಎಷ್ಟು ವರ್ಷ ಎಂದು ನೆನಪಿಲ್ಲ.

ಸ.ನಂ. 188 ರಲ್ಲಿ ಒಟ್ಟು ಎಷ್ಟು ಕ್ಷೇತ್ರ ಇದೆ ಎಂದು ಗೊತ್ತಿಲ್ಲ. ಸ.ನಂ. 188 ರಲ್ಲಿ ಸರಕಾರಿ ರಸ್ತೆ ಇರುತ್ತದೆ. ಸದರಿ ರಸ್ತೆಯು ಟಾರ್ ರಸ್ತೆ ಆಗಿರುತ್ತದೆ. ಸದರಿ ಸ.ನಂ. 188 ರಲ್ಲಿ ಒಟ್ಟು ಎಷ್ಟು ಗುಂಟೆ ರಸ್ತೆಗೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 188 ರಲ್ಲಿರುವ ಟಾರ್ ರಸ್ತೆಯನ್ನು ಸರಕಾರದವರು ಭೂಸ್ವಾಧೀನ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸ.ನಂ. 188/2 ರಲ್ಲಿ ಇರುವ ರಸ್ತೆಯನ್ನು ಸುಮಾರು 8 ವರ್ಷಗಳ ಹಿಂದೆ ನನ್ನ ಮಾಹಿತಿಗಾಗಿ ಟೇಪ ಇಟ್ಟು ಅಳತೆ ಮಾಡಿರುತ್ತೇನೆ. ನಾನು ಭೂಮಾಪಕರಿಗೆ ಅರ್ಜಿ ಸಲ್ಲಿಸಿ ಭೂಮಾಪನ ಮಾಡಿಕೊಂಡಿರುವುದಿಲ್ಲ.

ಮೂ. ದಾ. ನಂ. 76/18

ಪಿ.ಡಬ್ಲ್ಯು. 1

ನನ್ನ ವಾಸ್ತವ್ಯದ ಮನೆ ಸದರಿ ದಾವಾ ಸ್ವತ್ತಿನಿಂದ ಸುಮಾರು 300 ರಿಂದ 350 ಮೀಟರ ಅಂತರದಲ್ಲಿದೆ. ಸ.ನಂ. 188/2 ರಲ್ಲಿ ಎಷ್ಟು ಖರಾಬ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಸ್ವತ್ತನ್ನು ಖರೀದಿ ಮಾಡಿರುವ ಬಗ್ಗೆ ನ್ಯಾಯಾಲಯಕ್ಕೆ ಕ್ರಯಪತ್ರವನ್ನು ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ದಾವಾ ಸ್ವತ್ತನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರವು ನನ್ನ ತಂದೆಯವರ ಬಳಿ ಇದೆ ಎಂದರೆ ಇರಬಹುದು. ಪ್ರತಿವಾದಿಯವರು ನನ್ನ ಜಾಗವನ್ನು ಅತಿಕ್ರಮಣ ಮಾಡಿರುವ ಬಗ್ಗೆ ನಾನು ವಕೀಲರಿಗೆ ಮಾಹಿತಿ ಯಾವಾಗ ಕೊಟ್ಟಿದ್ದೆನೆ ಎಂದರೆ ವಕೀಲರಿಗೆ ಮಾಹಿತಿ ಕೊಟ್ಟಿರುವುದಿಲ್ಲ.

ನಾನು ಮತ್ತು ಪ್ರತಿವಾದಿಯವರು ಇಬ್ಬರೂ ಸೇರಿ ಮೋಜಣಿ ಮಾಡಿಸುವ ಬಗ್ಗೆ 2012 ರಲ್ಲಿ ಪ್ರತಿವಾದಿಯವರ ಬಳಿ ಕೇಳಿದ್ದೆನು. ಸದರಿ ವಿಷಯವನ್ನು ನಾನು ಪ್ರತಿವಾದಿಯವರ ಬಳಿ ಕೇಳಿದ್ದೆನು. ದಾವಾಸ್ತಿಯನ್ನು ಖರೀದಿ ಮಾಡುವ ವೇಳೆ ಬೇಲಿ, ಪಾಗಾರ ಇರಲಿಲ್ಲ, ಗಡಿಕಲ್ಲು ಇತ್ತು. ಖರೀದಿ ಮಾಡುವ ಸಮಯದಲ್ಲಿ ಸದರಿ ಜಾಗವನ್ನು ಮೋಜಣಿ ಮಾಡಿದುದರ ಬಗ್ಗೆ ಮಾಹಿತಿ ಇಲ್ಲ. ಸದರಿ ಜಾಗವನ್ನು ಮೋಜಣಿ ಮಾಡಲು ಭೂ ಮಾಪನ ಇಲಾಖೆಗೆ ಯಾವಾಗ ಅರ್ಜಿ ಸಲ್ಲಿಸಿದ್ದೇನೆಂದು ನೆನಪಿಲ್ಲ, ಆದರೆ ಸದರಿ ಅರ್ಜಿಯನ್ನು ನಾನೇ ಕೊಟ್ಟಿರುತ್ತೇನೆ.

ನಾವು ದಾವಾ ಸ್ವತ್ತನ್ನು ಖರೀದಿ ಮಾಡಿದ ಸಮಯದಲ್ಲಿ ಪ್ರತಿವಾದಿಯವರು ಅವರ ಜಾಗದಲ್ಲಿ ಅಡಿಕೆ ತೋಟವನ್ನು ಮಾಡಿದ್ದರು. ಸದರಿ ಅಡಿಕೆ ತೋಟವನ್ನು ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರ ಮಾಡಿದ್ದರು. ಸುಮಾರು 2 - 3 ವರ್ಷಗಳಿಂದ ಸದರಿ ತೋಟದಲ್ಲಿ ಫಸಲು ಬರುತ್ತಿದೆ. ನನ್ನ ಸ್ಥಳವು ಪೂರ್ವ ಪಶ್ಚಿಮವಾಗಿ ಎಷ್ಟು ಉದ್ದ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ಖರೀದಿಸಿದ ನಂತರ ನಾನು ಹಲಸಿನ ಮರ, ಮತ್ತಿ ಮರ, ಗೇರು ಮರ, ಅಕೇಶಿಯಾ ಮರವನ್ನು ಬೆಳೆಸಿರುತ್ತೇನೆ. ಪಹಣಿಪತ್ರದಲ್ಲಿ ಸದರಿ ಮರಗಳ ಉಲ್ಲೇಖದ ಬಗ್ಗೆ ನಮೂದಿಸಿಲ್ಲ.

ಮೂ. ದಾ. ನಂ. 76/18
ಪಿ.ಡಬ್ಲ್ಯು. 1

ಸ.ನಂ. 188/1 ಮತ್ತು ಸ.ನಂ. 188/2 ನ್ನು ಮೋಜಣಿ ಅರ್ಜಿ ಸಲ್ಲಿಸುವಾಗ ಸದರಿ ಸ್ಥಳದ ನಕಾಶೆಯನ್ನು ತೆಗೆಸಿದ್ದಿರಾ ಎಂದರೆ ಇಲ್ಲ. ಸ್ಥಳದ ನಕಾಶೆಯನ್ನು ನೋಡಿರುತ್ತೇನೆ, ಅದರ ಪ್ರತಿಯನ್ನು ತೆಗೆದುಕೊಂಡಿಲ್ಲ. ಪ್ರತಿವಾದಿಯವರು ಸ.ನಂ. 188/1 ರಲ್ಲಿ ಗಡಿ ಗುರುತಿಸಲು ತಂತಿ ಬೇಲಿಯನ್ನು ಹಾಕಿಕೊಂಡಿರುತ್ತಾರೆ. ಈಗ ನನ್ನ ಸ್ಥಳದಲ್ಲಿ ಪ್ರತಿವಾದಿಯವರು ಕಬ್ಬಿಣದ ಗೇಟ್‌ನ್ನು ಹಾಕಿರುತ್ತಾರೆ. ಇದರ ಬಗ್ಗೆ ನಾನು ನನ್ನ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇನೆ. ಪ್ರತಿವಾದಿಯವರು ತಂತಿ ಬೇಲಿ ಹಾಕುವ ಸಮಯದಲ್ಲಿ ನಾನು ಇರಲಿಲ್ಲ. ಪ್ರತಿವಾದಿಯವರಿಗೆ ಸೇರಿದ ಸ್ಥಳದಲ್ಲಿ ಪ್ರತಿವಾದಿಯವರು ಅಡಿಕೆ ತೋಟಕ್ಕೆ ಬಾವಿ ಮತ್ತು ಕೊಳದ ಬಾವಿಯ ನೀರನ್ನು ಬಳಸುತ್ತಾರೆ. ಪ್ರತಿವಾದಿಯವರು ಇಳಿಜಾರು ಪ್ರದೇಶದಲ್ಲಿ ಕೊಳದ ಬಾವಿಯನ್ನು ತೆಗೆದಿದ್ದಾರೆ.

ಸಾಮಾನ್ಯವಾಗಿ ಅರ್ಜಿ ಕೊಟ್ಟ ನಂತರ ಎರಡೂ ಪಕ್ಷದವರಿಗೆ ನೋಟಿಸ್ ಕೊಟ್ಟು ಜಾಗದ ಮೋಜಣಿ ಮಾಡುತ್ತಾರೆ ಎಂದರೆ ಸರಿ. ನಾನು ಸರ್ವೆ ಮಾಡಿಸಲು ಅರ್ಜಿ ಸಲ್ಲಿಸಿದ ನಂತರ ಭೂಮಾಪನ ಅಧಿಕಾರಿಗಳು ಎರಡು ಸಲ ನೋಟಿಸ್‌ನ್ನು ಕೊಟ್ಟಿದ್ದರು. ಸದರಿ ನೋಟಿಸಿಗೆ 2 ತಿಂಗಳುಗಳ ಅಂತರ ಇರಬಹುದು, ಖಚಿತವಾಗಿ ಹೇಳಲು ಬರುವುದಿಲ್ಲ. ದಾವಾ ಸ್ಥಳಕ್ಕೆ ಭೂಮಾಪನ ಅಧಿಕಾರಿಗಳು ಒಂದೇ ದಿನ 2 ಸಲ ಬಂದಿದ್ದರು. ಮೊದಲು ಮಾಡಿದ ಮೋಜಣಿ ಸರಿಯಾಗಿಲ್ಲ ಎಂದು ಸ್ಥಳದಲ್ಲಿ ನಾನು ವಿನಂತಿಸಿಕೊಂಡ ಮೇರೆಗೆ ಮಧ್ಯಾಹ್ನದ ನಂತರ ಪುನಃ ಮೋಜಣಿ ಮಾಡಿರುತ್ತಾರೆ. ಮೋಜಣಿ ಸರಿಯಾಗಿಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತಿರಾ ಎಂದರೆ ಸದರಿ ಜಾಗವು ಇಳಿಜಾರು ಪ್ರದೇಶ ಆಗಿರುವುದರಿಂದ ಒಂದು ಕಟ್ಟಿದ ದಾರ ಇನ್ನೊಂದು ಕೊನೆಯಲ್ಲಿ ಕಾಣಿಸದ ಆಧಾರದ ಮೇಲೆ ಮೋಜಣಿ ಸರಿಯಾಗಿಲ್ಲ ಎಂದು ಹೇಳಿರುತ್ತೇನೆ. ಇಳಿಜಾರು ಪ್ರದೇಶದಲ್ಲಿ ಯಾವ ರೀತಿ ಮೋಜಣಿ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಬೆಳಿಗ್ಗೆ ಮೋಜಣಿ ಮಾಡಿದ ಅಧಿಕಾರಿಗಳೇ ಮಧ್ಯಾಹ್ನದ ನಂತರ ಮೋಜಣಿ ಮಾಡಿರುತ್ತಾರೆ. ಸದರಿ ಮೋಜಣಿ ಮಾಡಿದ ಅಧಿಕಾರಿಗಳ ಹೆಸರು ನನಗೆ ಗೊತ್ತಿಲ್ಲ.

ಮೂ. ದಾ. ನಂ. 76/18

ಪಿ.ಡಬ್ಲ್ಯು. 1

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ